# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯಕೇಂದ್ರಕಾರ್ಯಾಲಯ, #39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001
ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047
ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.in


ಸಂಖ್ಯೆ:ಎಸ್‌ಹೆಚ್‌ಕ್ಯೂ/ 970 /2026–27 ದಿನಾಂಕ:27.08.2026

ಎಲ್ಲಾ ಜಿಲ್ಲಾ ಕಾರ್ಯದರ್ಶಿಗಳು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ,
ಕರ್ನಾಟಕ

ಮಾನ್ಯರೆ,

ವಿಷಯ:- ನಾಡ ಹಬ್ಬ ದಸರಾ ಪ್ರಯುಕ್ತ ಸ್ಕೌಟ್-ಗೈಡ್ ಪದಾಧಿಕಾರಿಗಳಿಗೆ **"ಮೈಸೂರು ದಸರಾ ವೀಕ್ಷಣಾ ಪ್ರವಾಸ ಕಾರ್ಯಕ್ರಮ"** ಏರ್ಪಡಿಸಿರುವ ಬಗ್ಗೆ.

****

ಮಾನ್ಯ ರಾಜ್ಯ ಮುಖ್ಯ ಆಯುಕ್ತರ ಆಶಯ ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಸಂಸ್ಥೆ ಮೈಸೂರು ರವರ ಪ್ರೋತ್ಸಾಹದಂತೆ ದ್ವಿತೀಯ ಬಾರಿಗೆ ದಿನಾಂಕ: 20.10.2026 ರಿಂದ 22.10.2026ರ ವರೆಗೆ 3 ದಿನಗಳ ಅವಧಿಗೆ ಹೆಮ್ಮೆಯ ನಾಡ ಹಬ್ಬ ದಸರಾ ಪ್ರಯುಕ್ತ ಸ್ಕೌಟ್-ಗೈಡ್ ಪದಾಧಿಕಾರಿಗಳ ಸಾಂಸ್ಕೃತಿಕ ನಗರಿ ಮೈಸೂರಿನ ದಸರಾ ವೀಕ್ಷಣಾ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸದರಿ ಮೈಸೂರು ದಸರಾ ವೀಕ್ಷಣಾ ಪ್ರವಾಸದಲ್ಲಿ ಈ ಕೆಳಕಂಡವರುಗಳು ಮತ್ತು **ಅವರ ಕುಟುಂಬದ ಇಬ್ಬರು ಸದಸ್ಯರೊಂದಿಗೆ** ಮಾತ್ರ ಭಾಗವಹಿಸಲು ಅವಕಾಶವನ್ನು ನೀಡಲಾಗಿದೆ.

1. ಜಿಲ್ಲಾ ಮುಖ್ಯ ಆಯುಕ್ತರು
2. ಜಿಲ್ಲಾ ಸ್ಕೌಟ್/ಗೈಡ್ ಆಯುಕ್ತರು
3. ಜಿಲ್ಲಾ ಖಜಾಂಚಿಗಳು
4. ಜಿಲ್ಲಾ ಕಾರ್ಯದರ್ಶಿಗಳು
5. ಎಲ್ಲಾ ಸಂಘಟಕರುಗಳು
6. ರಾಜ್ಯ ಕೇಂದ್ರ ಕಛೇರಿ ಮತ್ತು ತರಬೇತಿ ಕೇಂದ್ರಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು

ಈ ಮೈಸೂರು ದಸರಾ ವೀಕ್ಷಣಾ ಪ್ರವಾಸದ ಅವಧಿಯಲ್ಲಿ ಅರಮನೆಯಿಂದ ನೆರವೇರಿಸಲ್ಪಡುವ ನಾಡ ಹಬ್ಬದ ಆಚರಣೆಯನ್ನು ವೀಕ್ಷಿಸುವುದು, ಚಾಮುಂಡೇಶ್ವರಿ ದೇವಿಯ ದರ್ಶನ, ಕೆ.ಆರ್.ಎಸ್. ಸಂಗೀತಾ ಕಾರಂಜಿಗಳನ್ನು ವೀಕ್ಷಿಸುವುದು, ಮುಂತಾದ ವಿಶೇಷ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು. ಭಾಗವಹಿಸುವವರಿಗೆ ವಸತಿ ಹಾಗೂ ಊಟೋಪಚಾರದ ವ್ಯವಸ್ಥೆಯನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಮೈಸೂರು ಜಿಲ್ಲಾ ಸಂಸ್ಥೆಯವರು ನಿರ್ವಹಿಸಲು ಸಮ್ಮತಿಸಿರುವುದು ಹರ್ಷದಾಯಕ.

ಈ **"ಮೈಸೂರು ದಸರಾ ವೀಕ್ಷಣಾ ಪ್ರವಾಸ ಕಾರ್ಯಕ್ರಮ"**ದಲ್ಲಿ ಭಾಗವಹಿಸುವವರು, ತಾವು ಮತ್ತು ತಮ್ಮೊಂದಿಗೆ ಬರುವ ಕುಟುಂಬದ ಗರಿಷ್ಠ ಇಬ್ಬರು ಸದಸ್ಯರುಗಳ ಸಂಪೂರ್ಣ ವಿವರಗಳನ್ನು (ಹೆಸರು, ಪದನಾಮ, ಸಂಬಂಧ, ಮೊಬೈಲ್ ಸಂಖ್ಯೆ, ಆಧಾರ ಕಾರ್ಡ್, ಇತ್ಯಾದಿಗಳು) ಕಡ್ಡಾಯವಾಗಿ ಜಿಲ್ಲಾ ಸಂಸ್ಥೆಯ ಮುಖೇನ ದಿನಾಂಕ:05.10.2026ರ ಒಳಗಾಗಿ ರಾಜ್ಯ ಸಂಸ್ಥೆಗೆ ಕಳುಹಿಸಿ ಅದರ ಒಂದು ಪ್ರತಿಯನ್ನು ತಪ್ಪದೇ ಮೈಸೂರು ಜಿಲ್ಲಾ ಸಂಸ್ಥೆಗೆ ಕಳುಹಿಸುವುದು ಹಾಗೂ ರಾಜ್ಯ ಸಂಸ್ಥೆಯಿಂದ ನೀಡಲಾದ https://zfrmz.in/NAbpED376bcMTJ6rqVof ಲಿಂಕ್‌ನಲ್ಲಿ ನೊಂದಾಯಿಸಿಕೊಳ್ಳುವುದು.

......2

ಭಾಗವಹಿಸುವ ಬಗ್ಗೆ ಒಪ್ಪಿಗೆ ನೀಡಿರುವವರು ಕಡ್ಡಾಯವಾಗಿ ಭಾಗವಹಿಸುವುದು. ಭಾಗವಹಿಸುವುದಾಗಿ ತಿಳಿಸಿ ಭಾಗವಹಿಸದಿದ್ದಲ್ಲಿ ಸಾಕಷ್ಟು ವ್ಯವಸ್ಥೆ ಕೈಗೊಳ್ಳಲಿರುವ ಮೈಸೂರು ಜಿಲ್ಲಾ ಸಂಸ್ಥೆಗೆ ಬಹಳಷ್ಟು ತೊಂದರೆ ಆಗುವುದನ್ನು ಮನಗಾಣುವುದು. ಆದ್ದರಿಂದ ಎಲ್ಲಾ ವ್ಯವಸ್ಥೆ ಮಾಡಲು ತಾವು ಭಾಗಹಿಸುವ ಬಗ್ಗೆ ಭಾಗವಹಿಸುತ್ತಿರುವವರ ವಿವರಗಳೊಂದಿಗೆ ಕಡ್ಡಾಯವಾಗಿ ನಿಗಧಿತ ದಿನಾಂಕದೊಳಗಾಗಿ ಪತ್ರವನ್ನು ಕಳುಹಿಸುವುದು.

ದಿನಾಂಕ:20.10.2026ರಂದು ಬೆಳಗ್ಗೆ 8.00 ಗಂಟೆಯ ಒಳಗಾಗಿ ಶ್ರೀ ಜಯಚಾಮರಾಜೇಂದ್ರ ಜಿಲ್ಲಾ ಸ್ಕೌಟ್-ಗೈಡ್ ಭವನ, ಮೈಸೂರು ಜಿಲ್ಲಾ ಸಂಸ್ಥೆ, ಮೈಸೂರು (ಹಳೇಯ ಜಿಲ್ಲಾಧಿಕಾರಿಗಳ ಕಛೇರಿಯ ಹಿಂಬಾಗ) ಇಲ್ಲಿ ನೊಂದಾಯಿಸಿಕೊಳ್ಳುವುದು. ದಿನಾಂಕ:22.10.2026ರಂದು ಸಂಜೆ 5.00 ಗಂಟೆಯ ನಂತರ ಬಿಡುಗಡೆಗೊಳಿಸಲಾಗುವುದು.

ಸ್ಕೌಟ್-ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

ರಾಜ್ಯ ಮುಖ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ

**ಪ್ರತಿಯನ್ನು:**

1. ಜಿಲ್ಲಾ ಮುಖ್ಯ ಆಯುಕ್ತರುಗಳು, ಭಾ.ಸ್ಕೌ.ಗೈ, ಜಿಲ್ಲಾ ಸಂಸ್ಥೆ, ಕರ್ನಾಟಕ
2. ಎಸ್.ಓ.ಸಿ/ಎಸ್.ಟಿ.ಸಿ(ಸ್ಕೌ/ಗೈ), ಭಾ.ಸ್ಕೌ&ಗೈ, ಕರ್ನಾಟಕ
3. ಕಛೇರಿ ಪ್ರತಿ